## ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ)ರವರ ಕಛೇರಿ, ಕಲಬುರಗಿ

ಸಂಖ್ಯೆ: ಅ2/ಆಡಳಿತ/ಪ್ರಾಶಾಶಿ/ಪ್ರೌಶಾಶಿ/ಬಡ್ತಿ /ಗ್ರೇ-2/65/2019-20 ದಿನಾಂಕ: 03-06-2020

### ಅಧಿಸೂಚನೆ

ವಿಷಯ :- ಕಲಬುರಗಿ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ./ಬಿ.ಪಿ.ಇಡಿ. ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು / ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ದಿನಾಂಕ: 01-01-2019 ರಲ್ಲಿದ್ದಂತೆ 2018ನೇ ಬ್ಲಾಕ್ ಅವಧಿಯ (ದಿನಾಂಕ: 01/01/2018 ರಿಂದ 31/12/2018 ರವರೆಗೆ) ಮೇರಿಟ್ ಆಧಾರಿತ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ :- 1. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸಲ್ಲಿಸಲಾಗಿರುವ ಶಿಕ್ಷಕರ ಪ್ರಸ್ತಾವನೆಗಳು.
2. ಈ ಕಛೇರಿಯ ಅಧಿಸೂಚನೆ ಸಮ ಸಂಖ್ಯೆ ದಿನಾಂಕ: 13-03-2020
3. ಸಂಬಂಧಿಸಿದ ಶಿಕ್ಷಕರಿಂದ ಸಲ್ಲಿಸಲಾಗಿರುವ ಪ್ರಸ್ತಾವನೆ / ಆಕ್ಷೇಪಣೆ

* * *

ಕಲಬುರಗಿ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ./ಬಿ.ಪಿ.ಇಡಿ. ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು / ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ದಿನಾಂಕ: 01-01-2019 ರಲ್ಲಿದ್ದಂತೆ 2018ನೇ ಬ್ಲಾಕ್ ಅವಧಿಯ (ದಿನಾಂಕ: 01/01/2018 ರಿಂದ 31/12/2018 ರವರೆಗೆ) ಮೇರಿಟ್ ಆಧಾರಿತ ವಿಷಯವಾರು ಹಾಗೂ ಮಾಧ್ಯಮವಾರು, ಮೂಲವೃಂದ, ಸ್ಥಳೀಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ ಉಲ್ಲೇಖ (02) ರನ್ವಯ ಈ ಕಛೇರಿಯ ವೆಬ್‌ಸೈಟ (ddpikalaburagi.in/seniority.aspx) ದಲ್ಲಿ ಪ್ರಕಟಿಸಿ ಸಂಬಂಧಿಸಿದ ಶಿಕ್ಷಕರಿಂದ ಸದರಿ ಜೇಷ್ಠತಾ ಪಟ್ಟಿಗೆ ಏನಾದರು ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 27-03-2020 ರವರೆಗೆ ಈ ಕಛೇರಿಗೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ಅದರಂತೆ ಕೋವಿಡ್ -19 ರ ನಿಮಿತ್ಯ ದಿನಾಂಕ: 25-03-2020 ರಿಂದ ಜಾರಿಗೆ ಬಂದ ಲಾಕ್‌ಡೌನಗಿಂತ ಪೂರ್ವದಲ್ಲಿ ಉಲ್ಲೇಖ (03) ರನ್ವಯ ಸಂಬಂಧಿಸಿದ ಶಿಕ್ಷಕರಿಂದ ಸ್ವೀಕರಿಸಲಾದ ಎಲ್ಲಾ ಆಕ್ಷೇಪಣೆಗಳನ್ನು ಹಾಗೂ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿರುವ ವಿವರಗಳಿಗೆ ಸಂಬಂಧಿಸಿದಂತೆ, ಸೂಕ್ತ ತಿದ್ದುಪಡಿಗಳಿಗಾಗಿ ಸಲ್ಲಿಸಿರುವ ಮನವಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಇತ್ಯರ್ಥಪಡಿಸಿದ ನಂತರ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಈ ಕಛೇರಿಯ ವೆಬ್‌ಸೈಟ (ddpikalaburagi.in/seniority.aspx) ದಲ್ಲಿ ಪ್ರಕಟಿಸಲಾಗಿದೆ.

ದಿನಾಂಕ: 31-12-2018 ರವರೆಗೆ ಬಿ.ಇಡಿ. / ಬಿ.ಪಿ.ಇಡಿ. / ಸ್ನಾತಕೋತ್ತರ (ಸಂಬಂಧಿಸಿದ ಭಾಷಾ ಶಿಕ್ಷಕರ ವಿಷಯಗಳಿಗೆ ಮಾತ್ರ) ಪದವಿಯ ಫಲಿತಾಂಶವನ್ನು ಪ್ರಕಟಿಸಲಾದ ಶಿಕ್ಷಕರ ಹೆಸರು 2018ನೇ ಬ್ಲಾಕ್ ಅವಧಿಯ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಲಾಗಿದೆ.

ಸಂಬಂಧಿಸಿದ ಶಿಕ್ಷಕರು ಸದರಿ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಗಮನಿಸಿ ಪಟ್ಟಿಯಲ್ಲಿ ನಮೂದಿಸಿರುವ ಈ ಕೆಳಕಂಡ ನಮೂದನೆ ಕುರಿತು ಏನಾದರೂ ತಿದ್ದುಪಡಿಗಳು ಇದ್ದಲ್ಲಿ ವೆಬ್‌ಸೈಟನಲ್ಲಿ ಪ್ರಕಟಿಸಿದ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ದಿನಾಂಕ: 10-06-2020 ರವರೆಗೆ ಈ ಕಛೇರಿಗೆ ಸಲ್ಲಿಸಬಹುದು. ನಿಗದಿಪಡಿಸಲಾದ ಅವಧಿಯ ನಂತರ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ.

1. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಮೇರಿಟ್ ಆಧಾರಿತ ಆಯ್ಕೆಯ ಪೂರ್ವದಲ್ಲಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯಿಂದ ನೇಮಕಗೊಂಡ ಶಿಕ್ಷಕರ ಜೇಷ್ಠತೆಯನ್ನು ಸೇವೆಗೆ ಸೇರಿದ ದಿನಾಂಕವನ್ನು ಆಧಾರಿಸಿ ನಿಗದಿಪಡಿಸಲಾಗಿದೆ. 1991-92ನೇ ಸಾಲಿನಿಂದ ಮೇರಿಟ್ ಆಧಾರಿತ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿದ್ದು, 2001-02ನೇ ಸಾಲಿನಿಂದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆಯನ್ನು ನಡೆಸಲಾಗಿದೆ. ಅದರಂತೆ ಸದರಿ ಆಯ್ಕೆ ಪ್ರಕ್ರಿಯೆಯಲ್ಲಿ ಆಯಾ ನೇಮಕಾತಿ ವರ್ಷಗಳ ಆಯ್ಕೆ ಪಟ್ಟಿಗಳಲ್ಲಿ ಅಭ್ಯರ್ಥಿಗಳಿಂದ ಪಡೆದುಕೊಂಡಿರುವ ಮೇರಿಟ್‌ವನ್ನು ಆಧಾರಿಸಿ ಪ್ರಸ್ತುತ ಜೇಷ್ಠತಾ ಪಟ್ಟಿಯನ್ನು

ಸಿದ್ಧಪಡಿಸಲಾಗಿದೆ. ಮುಂದುವರೆದು ಬೇರೆ ಜಿಲ್ಲೆಗಳಲ್ಲಿ ನೇಮಕಾತಿ ಹೊಂದಿ ಈ ಜಿಲ್ಲೆಗೆ ವರ್ಗಾವಣೆ ಮೂಲಕ ಬಂದಿರುವ ಶಿಕ್ಷಕರ ಜೇಷ್ಠತೆಯನ್ನು ಈ ಜಿಲ್ಲೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಂತೆ ನಿಗದಿಪಡಿಸಲಾಗಿದೆ.

2. ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನೇಮಕಾತಿ ಪ್ರಕ್ರಿಯೆ ವರ್ಷದ ಮಾಹಿತಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಾಲೆಯ ಹೆಸರು, ತಾಲೂಕು, ಪ್ರವರ್ಗ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಕಲಬುರಗಿ ಜಿಲ್ಲೆಗೆ ವರ್ಗಾವಣೆ ಮೂಲಕ ಬಂದಿರುವ ದಿನಾಂಕ, ನೇಮಕಾತಿಯ ವಿಧಾನ, ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆ ಪಟ್ಟಿಯಲ್ಲಿದ್ದಂತೆ ಮೇರಿಟ್, ಬೋಧನಾ ಮಾಧ್ಯಮ, ಪದವಿಯ ಐಚ್ಛಿಕ ವಿಷಯಗಳು, ಬಿ.ಇಡಿ. ಬೋಧನಾ ವಿಧಾನಗಳು ಹಾಗೂ ಉತ್ತೀರ್ಣರಾಗಿದ ವರ್ಷ, ಸ್ನಾತಕೋತ್ತರ ಪದವಿಯ ವಿಷಯ (ಭಾಷಾ ಶಿಕ್ಷಕರಿಗೆ ಮಾತ್ರ) ಹಾಗೂ ಉತ್ತೀರ್ಣರಾಗಿದ ವರ್ಷದ ಕುರಿತು ಏನಾದರು ತಿದ್ದುಪಡಿಗಳು ಇದ್ದಲ್ಲಿ ನಿಗದಿತ ನಮೂನೆಯಲ್ಲಿ ಆಕ್ಷೇಪಣೆ ಸಲ್ಲಿಸುವುದು.

3. ಕೆಲವೊಂದು ಶಿಕ್ಷಕರು ತಮ್ಮ ಪ್ರಸ್ತಾವನೆಯೊಂದಿಗೆ ಮೇರಿಟ್‌ನ್ನು ನಮೂದಸದೆ ಇರುವುದರಿಂದ ಅವರು ಆಯಾ ವರ್ಷದಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಕೆಳಗೆ ಸ್ಥಾನ ಪಡೆದುಕೊಂಡಿರುತ್ತಾರೆ. ಸದರಿ ಶಿಕ್ಷಕರು ಈ ಜಿಲ್ಲೆಯಲ್ಲಿ ಆಯ್ಕೆ ಹಾಗೂ ನೇಮಕಾತಿ ಹೊಂದಿದಲ್ಲಿ ತಮ್ಮ ನೇಮಕಾತಿ ಆದೇಶದ ಪ್ರತಿಯೊಂದಿಗೆ ನೇಮಕಾತಿ ವಿಭಾಗಕ್ಕೆ ಸಂಪರ್ಕಿಸಿ ಆಯ್ಕೆ ಪಟ್ಟಿಯನ್ನು ಗಮನಿಸಿ ತಮ್ಮ ಮೇರಿಟವನ್ನು ಪಡೆದು ನಿಗದಿತ ನಮೂನೆಯಲ್ಲಿ ಆಕ್ಷೇಪಣೆಯನ್ನು ಸಲ್ಲಿಸುವುದು. ಒಂದು ವೇಳೆ ಮೇರಿಟ್ ಮಾಹಿತಿ ಒದಗಿಸದೆ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರ ಹೆಸರು ಆಯಾ ವರ್ಷದ ಪಟ್ಟಿಯಲ್ಲಿ ಯಥವತ್ತಾಗಿ ಕೊನೆಯ ಸ್ಥಾನದಲ್ಲಿ ಮುಂದುವರೆಸಲಾಗುವುದು. ಸದರಿ ಶಿಕ್ಷಕರು ಬೇರೆ ಜಿಲ್ಲೆಯಲ್ಲಿ ನೇಮಕಾತಿ ಹೊಂದಿದಲ್ಲಿ ಈ ಜಿಲ್ಲೆಗೆ ಸೇರಿದ ದಿನಾಂಕದ ವಿವರಗಳನ್ನು ಸಲ್ಲಿಸುವುದು.

4. ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಭಾಷಾ ವಿಷಯಗಳಲ್ಲಿ ಸೇರಿರುವ ಕೆಲವೊಂದು ಶಿಕ್ಷಕರು ಬಿ.ಇಡಿ. ಪದವಿಯಲ್ಲಿ ಅಭ್ಯಾಸ ಮಾಡಿದ ಬೋಧನಾ ವಿಧಾನದ ವಿವರಗಳು ನಮೂದಿಸಿರುವದಿಲ್ಲ. ಸದರಿ ಶಿಕ್ಷಕರು ಬಿ.ಇಡಿ. ಅಂಕಪಟ್ಟಿಯ ಪ್ರತಿಯೊಂದಿಗೆ ಮಾಹಿತಿಯನ್ನು ಸಲ್ಲಿಸುವುದು.

5. 2018ನೇ ಬ್ಲಾಕ್ ಅವಧಿಯಲ್ಲಿ ಅಂದರೆ ದಿನಾಂಕ: 01-01-2018 ರಿಂದ 31-12-2018 ರ ಮಧ್ಯದ ಅವದಿಯಲ್ಲಿ ಬಿ.ಇಡಿ. ಫಲಿತಾಂಶ ಹಾಗೂ ಆಯಾ ಭಾಷೆಗೆ ಸಂಬಂಧಿಸಿದಂತೆ, ಸ್ನಾತಕೋತ್ತರ ಪದವಿಯ ಫಲಿತಾಂಶ ಪ್ರಕಟಿಸಿದ ಶಿಕ್ಷಕರ ಹೆಸರು ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸೇರದೆ ಇದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಸೇವಾ ವಿವರ ನಮೂನೆಯನ್ನು ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಧೃಢೀಕರಣ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಪ್ರತಿಗಳು ಮತ್ತು ಸ್ಥಳೀಯ ಅಭ್ಯರ್ಥಿಯ ಪ್ರಮಾಣ ಪತ್ರ (ಅನುಬಂಧ-ಎ) ಹಾಗೂ ಸಹಮತಿ ಪತ್ರ (ಅನುಬಂಧ-ಸಿ) ದೊಂದಿಗೆ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸತಕ್ಕದ್ದು.

6. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರು ಈ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾವಣೆ ಮೂಲಕ ಹೋಗಿದಲ್ಲಿ ಅವರ ವಿವರಗಳನ್ನು ಬಿಡುಗಡೆಯಾದ ದಿನಾಂಕ ಹಾಗೂ ವರ್ಗಾವಣೆಯಾದ ಜಿಲ್ಲೆಯ ಹೆಸರಿನೊಂದಿಗೆ ದಿನಾಂಕ: 10-06-2020 ರವರೆಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಉಪನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಯನ್ನು :-

1. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿ ಸಂಬಂಧಿಸಿದ ಶಿಕ್ಷಕರ ಗಮನಕ್ಕೆ ತರಲು ತಿಳಿಸಿದೆ.
3. ಕಛೇರಿಯ ಸೂಚನಾ ಫಲಕಕ್ಕೆ.